**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 4/2025 |
| ಸಿ.ಡಬ್ಲ್ಯೂ | 1 |
| ಪಿ.ಡಬ್ಲ್ಯೂ | 1 |

| | | |
|---|---|---|
| ಹೆಸರು | :- | ಲಕ್ಷ್ಮವ್ವ ಕಟ್ಟಿಮನಿ |
| ತಂದೆ/ಗಂಡನ ಹೆಸರು | :- | ಲಕ್ಕಪ್ಪ |
| ವಯಸ್ಸು | :- | 48 ವರ್ಷ |
| ಉದ್ಯೋಗ | :- | ಒಕ್ಕಲುತನ |
| ವಾಸಸ್ಥಳ | :- | ಮಂಟೂರ |

**ಸಾಕ್ಷಿಯನ್ನು ದಿ:30.01.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**
**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ ರವರಿಂದ**

1.ಚಾಸಾ-4 ನನ್ನ ಸಹೋದರಿ. ಚಾಸಾ-6 ರವರ ಪರಿಚಯ ಇದೆ. ಚಾಸಾ-11 ನನ್ನ ಗಂಡ. ಚಾಸಾ-12 ನನ್ನ ಮಗಳು, ಚಾಸಾ-13 ನನ್ನ ಮಗ. ಚಾಸಾ-14 ನನ್ನ ಗಂಡನ ಅಣ್ಣನ ಮಗ, ಚಾಸಾ-15 ನನ್ನ ಸಂಬಂಧಿಕರು. ಆರೋಪಿತ ನನ್ನ ಅಳಿಯ. ದಿ:01.04.2024 ರಲ್ಲಿ ನಾವು ನನ್ನ ಮಗಳಾದ ಮಹಾದೇವಿ ಇವಳ ಮದುವೆಯನ್ನು ಆರೋಪಿತನೊಂದಿಗೆ ಮಾಡಿಕೊಟ್ಟಿದ್ದೆವು. ದಿ:03.04.2024 ರಂದು ಆರೋಪಿತನು ನನ್ನ ಮಗಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಿದ್ದು, 15 ದಿನಗಳ ನಂತರ ಅಳಿಯತನಕ್ಕೆ ಮತ್ತೆ ನಮ್ಮ ಮನೆಗೆ ಬಂದಿದ್ದರು. ಆಗ ಬಂಗಾರವನ್ನು ನೀಡಲು ಆರೋಪಿತ ಕೇಳಿದ್ದು, ಮದುವೆಯ ಸಮಯದಲ್ಲಿಯು ಯಾವುದೇ ವರದಕ್ಷಿಣೆ ನೀಡಿಲ್ಲ, ಆದ್ದರಿಂದ ಬಂಗಾರ ನೀಡಬೇಕು ಎಂದು ಕೇಳಿದ್ದು, ನಾವು 8 ರಿಂದ 10 ದಿನಗಳ ಹಿಂದೆ ಮದುವೆ ಆದ ಕಾರಣ ನಮ್ಮ ಬಳಿ ಹಣ ಇಲ್ಲ ಎಂದು ನಂತರ ಬಂಗಾರ ನೀಡುತ್ತೇವೆ ಎಂದು ತಿಳಿಸಿದೆವು. ನನ್ನ ಮಗಳನ್ನು ಆರೋಪಿತ ತನ್ನ ಮನೆಗೆ ಮತ್ತೆ ಕರೆದುಕೊಂಡು ಹೋಗಿದ್ದು, ಅಲ್ಲಿ ಆಕೆಗೆ ಆತ ವರದಕ್ಷಿಣೆ ನೀಡಿಲ್ಲ ಎಂದು, ಬಂಗಾರ ನೀಡಿಲ್ಲ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದನು. ನನ್ನ ಮಗಳು ಮನೆಯ ಹೊರಗಡೆ ಪಾತ್ರೆ ತೊಳೆಯುತ್ತಿದ್ದಾಗ ಆಕೆಯ ಶೀಲದ ಬಗ್ಗೆ ಸಹ ಅನಾವ್ಯಕವಾಗಿ ಸಂಶಯ ಪಟ್ಟನು. ನನ್ನ ಮಗಳು ನನಗೆ ಕರೆ ಮಾಡಿ ಆ ರೀತಿ ಆರೋಪಿತ ಕಿರುಕುಳ ನೀಡುತ್ತಿದ್ದಾನೆ ಎಂದು ತಿಳಿಸಿದನು. ನಾವು ಹಿರಿಯರ ಮೂಲಕ ಆರೋಪಿತನ ಮನೆಗೆ ಹೋಗಿ ಅಲ್ಲಿ ಹೊಂದಾಣಿಕೆ ಮಾಡಿಕೊಂಡು ಹೋಗಬೇಕು ಎಂದು ತಿಳಿ ಹೇಳಿದೆವು. ಆರೋಪಿತ ಹೊಲಕ್ಕೆ ಹೋಗುವಾಗ ಮನೆಯ ಮುಖ್ಯ ಬಾಗಿಲನ್ನು ಹೊರಗಡೆಯಿಂದ ಹಾಕಿಕೊಂಡು ವ್ಯವಸಾಯದ ಜಮೀನಿಗೆ ಹೋಗುತ್ತಿದ್ದನು. ನನ್ನ

ಮಗಳಿಗೆ ಆರೋಪಿತ, ಆರೋಪಿತನ ತಂದೆಯಾದ ಪಾಂಡಪ್ಪ, ಆರೋಪಿತನ ತಾಯಿಯಾದ ನಿಂಗವ್ವ ಮತ್ತು ಆರೋಪಿತನ ಅಣ್ಣನ ಹೆಂಡತಿಯಾದ ಬಾಲವ್ವ ಇವವರೆಲ್ಲರೂ ಕಿರುಕುಳ ನೀಡುತ್ತಿದ್ದರು.

2.ಪಂಚಮಿಗೆ ನನ್ನ ಮಗಳನ್ನು ನಾವು ಮನೆಗೆ ಕರೆದುಕೊಂಡು ಬಂದಿದ್ದೆವು. 4 ದಿನಗಳ ನಂತರ ಆರೋಪಿತ ನನ್ನ ಮಗಳನ್ನು ಕರೆದುಕೊಂಡು ಹೋಗಲು ಬಂದನು. ಆಗ ನನ್ನ ಗಂಡ ಎಲ್ಲಿ ಇದ್ದಾನೆ ಎಂದು ವಿಚಾರಿಸಿದಾಗ ಆತ ಹೊರಗಡೆ ಇದ್ದಾನೆ ಎಂದು ನಾನು ತಿಳಿಸಿದೆನು. ಆಗ ಆರೋಪಿತನು ತನಗೆ 5 ಲಕ್ಷ ರೂಪಾಯಿ ಅವಶ್ಯಕತೆ ಇದೆ ಎಂದು ವರದಕ್ಷಿಣೆ ಹಣವನ್ನು ಸಹ ನೀಡಿಲ್ಲ ಎಂದು ಮತ್ತು ಬಂಗಾರ ಸಹ ನೀಡಿಲ್ಲ ಎಂದು ಆದ್ದರಿಂದ ತುರ್ತಾಗಿ 5 ಲಕ್ಷ ರೂಪಾಯಿ ನೀಡಲೇಬೇಕು, ಆದ್ದರಿಂದ ನನ್ನ ಗಂಡನನ್ನು ಕರೆಯಲು ನನಗೆ ಹೇಳಿದನು. ನನ್ನ ಗಂಡ ಬೇರೆ ಊರಿಗೆ ಹೋಗಿದ್ದಾನೆ ಎಂದು ತಿಳಿಸಿದೆನು. ಪಂಚಮಿಗೆ ಬಂದಾಗ ನನ್ನ ಮಗಳು ಆರೋಪಿತ ಆಕೆಗೆ ಅಡುಗೆ ಮಾಡಲು ಬರುವುದಿಲ್ಲ ಎಂದು ತೊಂದರೆ ನೀಡುತ್ತಿದ್ದಾನೆ ಎಂದು ತಿಳಿಸಿದ್ದು, ಆಗ ನಾವು ಹಿರಿಯರ ಮೂಲಕ ಆತನಿಗೆ ಆ ರೀತಿ ತೊಂದರೆ ನೀಡಬಾರದು ಎಂದು ಕೇಳಿಕೊಂಡೆವು. ಮನೆಗೆ ಹೋದ ನಂತರ ನನ್ನ ಮಗಳಿಗೆ ಆರೋಪಿತ ನಾವು ಯಾವುದೇ ವರದಕ್ಷಿಣೆ ಹಣ, ಬಂಗಾರ ಮತ್ತು ಹಣ ಕೇಳಿದಾಗ ಹಣ ನೀಡಿಲ್ಲ ಎಂದು ಮತ್ತು ಆ ರೀತಿ ಹಣ ನೀಡುವವರೆಗೆ ತೊಂದರೆ ಕೊಡುತ್ತೇವೆ ಎಂದು ತಿಳಿಸಿದನು. ಸಣ್ಣ - ಪುಟ್ಟ ವಿಷಗಳಿಗೆ ನನ್ನ ಮಗಳಿಗೆ ಯಲ್ಲವ್ವ, ಸಾಯವ್ವ ಮತ್ತು ಅಕ್ಕವ್ವ ಇವರು ಕಿರುಕುಳ ನೀಡಿ ಆಕೆಯೊಂದಿಗೆ ಅಸಭ್ಯವಾಗಿ ವರ್ತನೆ ಮಾಡಿದರು.

3.ಅಗಷ್ಟ 15 ರಂದು ಒಂದೂವರೆ ವರ್ಷದ ಹಿಂದೆ ಬೆಳಿಗ್ಗೆ 7-30 ಗಂಟೆಗೆ ನನಗೆ ಆರೋಪಿತ ಕರೆ ಮಾಡಿ, ಮಳೆ ಬರುತಿತ್ತು ಎಂದು ಮತ್ತು ಆಗ ಮಳೆಯಲ್ಲಿ ವ್ಯವಸಾಯದ ಜಮೀನಿಗೆ ದ್ವಿಚಕ್ರ ವಾಹನದ ಮೇಲೆ ಹೋಗುತ್ತಿದ್ದಾಗ ದ್ವಿಚಕ್ರ ವಾಹನ ಸ್ಲಿಪ್ ಆಗಿ ಬಿದ್ದು ಪೆಟ್ಟಾಗಿದೆ ಎಂದು ಮತ್ತು ನನ್ನ ಮಗಳಾದ ಮಹಾದೇವಿ ಇವಳನ್ನು ಕುಬಸದ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೆವು ಎಂದು ತಿಳಿಸಿದರು. ಆಗ ನಾನು ಮತ್ತು ನನ್ನ ಮಗ ಚಾಸಾ-13 ಕಾಶೆಪ್ಪ ಇವನ ಜೊತೆಗೆ ಬೆಳಿಗ್ಗೆ 8-30 ಸುಮಾರಿಗೆ ಕುಬಸದ ಆಸ್ಪತ್ರೆಗೆ ಬಂದೆವು. ಅಲ್ಲಿ ನನ್ನ ಮಗಳನ್ನು ಒಂದು ಹಾಸಿಗೆಯ ಮೇಲೆ ಮಲುಗಿಸಿದ್ದು, ಆಕೆಯ ಮುಖ ಮತ್ತು ಕಾಲು ಊದಿಕೊಂಡಿದ್ದು, ಅದು ಪೂರ್ತಿಯಾಗಿ ತಣ್ಣಗಾಗಿತ್ತು, ಆಕೆಯನ್ನು ನಾನು ಮಹಾದೇವಿ ಎಂದು ಕರೆದು ಅಲುಗಾಸಿದಾಗ ಆಕೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಆಕೆಗೆ ನಾನು ಅಲುಗಾಡುಸುತ್ತಿದ್ದಾಗ ಆಕೆಯ ತಲೆಯ ಹಿಂಬದಿಗೆ ರಕ್ತ ಬರತಿತ್ತು, ಆಕೆಯ ಕುತ್ತಿಗೆ ಹಿಚುಕಿದ್ದು, ಅಲ್ಲಿ ಕೈಗಳ ಗುರುತು ಇತ್ತು. ಆಗ ನಾನು

ಆರೋಪಿತನಿಗೆ ಆತನ ತಂದೆ ಪಾಂಡಪ್ಪ, ತಾಯಿ ನಿಂಗವ್ವ ಮತ್ತು ಸಹೋದರಿ ಯಲ್ಲವ್ವ ಇವರಿಗೆ ಆ ರೀತಿ ಗುರುತುಗಳು ಏಕೆ ಆಗಿವೆ ಎಂದು ವಿಚಾರಿಸಿದಾಗ ಅವರು ಸರಿಯಾಗಿ ಉತ್ತರ ನೀಡಲಿಲ್ಲ. ನನ್ನ ಮಗಳನ್ನು ನೋಡಿದಾಗ ಆಕೆ ನೈಟಿ ಹಾಕಿಕೊಂಡಿದ್ದು, ಆಕೆಗೆ ನಾನು ಪಂಚಮಿ ಸಮಯದಲ್ಲಿ ಕೊಡಿಸಿಕೊಟ್ಟ ಬಳೆ ಒಡೆದಿರಲಿಲ್ಲ, ಆಕೆಯ ಮೈಗೆ ಎಲ್ಲಿಯು ಕೆಸರು ಹತ್ತಿರಲಿಲ್ಲ, ಆರೋಪಿತನಿಗೂ ಸಹ ಎಲ್ಲಿಯು ಗಾಯ ಆಗಿರಲಿಲ್ಲ. ಆರೋಪಿತ, ಆರೋಪಿತನ ತಂದೆಯಾದ ಪಾಂಡಪ್ಪ, ಆರೋಪಿತನ ಸಹೋದರನಾದ ವಿಠ್ಠಲ, ಆರೋಪಿತನ ಸಹೋದರಿ ಯಲ್ಲವ್ವ, ಆರೋಪಿತನ ತಾಯಿ ನಿಂಗವ್ವ ಮತ್ತು ಆರೋಪಿತನ ಅಣ್ಣನ ಹೆಂಡತಿಯಾದ ಬಾಲವ್ವ ಇವರೆಲ್ಲರೂ ಸೇರಿ ನನ್ನ ಮಗಳಾದ ಮಹಾದೇವಿ ಇವರನ್ನು ಕತ್ತು ಹಿಚುಕಿ ಕೊಂದಿರುತ್ತಾರೆ.

4.ತದನಂತರ ನಾನು ಮುಧೋಳ ಪೊಲೀಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ನಾನು ಹೇಳಿದಂತೆ ಚಾಸಾ-22 ಸದಪ್ಪ ಇವರು ದೂರನ್ನು ಬರೆದಿರುತ್ತಾರೆ. ಆತ ದೂರು ಬರೆದು ನಂತರ ನನಗೆ ಓದಿ ಹೇಳಿದ್ದು, ಅದು ಸರಿ ಇದೆ ಎಂದು ನಾನು ತಿಳಿದುಕೊಂಡು ಹೆಬ್ಬೆಟ್ಟಿನ ಗುರುತು ಪ್ರತಿ ಪುಟದ ಮೇಲೆ ಹಾಕಿರುತ್ತೇನೆ. ಸಾಕ್ಷಿಗೆ ಈಗ ದೂರನ್ನು ತೋರಿಸುತ್ತಿದ್ದು ಅದರ ಮೇಲಿನ ತಮ್ಮ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿದ್ದರಿಂದ ಸದರಿ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರ.ವ.ವ ತೋರಿಸುತ್ತಿದ್ದು, ಅದರ ಮೇಲಿನ ತಮ್ಮ ಹೆಬ್ಬೆಟ್ಟು ಗುರುತು ಗುರುತಿಸಿದ್ದರಿಂದ ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ 3 ಛಾಯಾಚಿತ್ರಗಳನ್ನು ತೋರಿಸುತ್ತಿದ್ದು ಅವು ತನ್ನ ಮಗಳ ಶವದ ಛಾಯಾಚಿತ್ರ ಎಂದು ಗುರುತಿಸುತ್ತಾರೆ. ಸದರಿ ಛಾಯಾಚಿತ್ರಗಳೊಂದಿಗೆ ಕಲಂ.65(ಬಿ) ಅಡಿ ಪ್ರಮಾಣ ಪತ್ರ ಲಗತ್ತಿಸಿದ ಕಾರಣ ಸದರಿ ಛಾಯಾಚಿತ್ರಗಳನ್ನು ಕ್ರಮವಾಗಿ ನಿಪಿ-3, ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು. ಕಲಂ.65(ಬಿ) ಅಡಿ ಪ್ರಮಾಣ ಪತ್ರವನ್ನು ನಿಪಿ-6 ಎಂದು ಗುರುತಿಸಲಾಯಿತು. ಸದರಿ ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸರ ಮುಂದೆ ಮಾಹಿತಿ ನೀಡಿರುತ್ತೇನೆ.

ಈ ಹಂತದಲ್ಲಿ ಸ.ಸ.ಅ ರವರು ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ